ಕನ್ನಡ ಸಂಭ್ರಮ

# ಜಟಕಾಬಂಡಿ ಏರಿ ಕಾವ್ಯ ಪರಂಪರೆ ಸವಾರಿ

ರಾಜ್‌ಕುಮಾರ್ ಅಭಿನಯ–ಗಾಯನದಲ್ಲಿ ಮೂಡಿರುವ, ಹಂಸಲೇಖ ರಚನೆ–ಸಂಗೀತ ನಿರ್ದೇಶನದ ‘ಆಕಸ್ಮಿಕ’ ಸಿನಿಮಾದ ‘ಹುಟ್ಟಿದರೆ ಕನ್ನಡನಾಡಲ್ಲಿ ಹುಟ್ಟಬೇಕು’ ಗೀತೆ ಜನರ ನಾಲಿಗೆಗಳಲ್ಲಿ ನಲಿದಾಡುವ ಹಾಡು. ರಾಜ್ಯೋತ್ಸವ ಸಂದರ್ಭದಲ್ಲಿ ಹಾಡಲಿಕ್ಕೆ ಸರ್ಕಾರ ಶಿಫಾರಸು ಮಾಡಿರುವ ಗೀತೆಗಳಲ್ಲಿ ಈ ಹಾಡೂ ಸೇರಿಕೊಂಡಿದೆ. ಅಂದಹಾಗೆ, ಈ ಹಾಡು ರೂಪುಗೊಂಡಿದ್ದು ಹೇಗೆ ಗೊತ್ತೇ?

■ ಕಟ್ಟೆ ಗುರುರಾಜ್



ಫ್ರೆಶ್ ಅಂಥಾರಲ್ಲ; ಆಗ ತಾನೇ ಅರಳಿದ ಹೂವಿನಂತೆ ರಾಜ್‌ಕುಮಾರ್ ಅವರ ಮುಖಾರವಿಂದವಿತ್ತು. ಮುಖದ ಮೆರುಗನ್ನು ಹೆಚ್ಚಿಸಲು ಬಿಳಿಜುಬ್ಬ, ಬಿಳಿಪಂಚೆ. ಯೋಗದ ಪ್ರಖರ ವರ್ಚಸ್ಸು ಮುಖದಲ್ಲಿ. ಬೆಳಗ್ಗೆ 8 ಗಂಟೆ ಹೊತ್ತಿಗೆ ಸ್ನಾನ–ಪೂಜೆ ಮುಗಿಸಿದ್ದಾರೆ ಅಂತ ಹೇಳೋಕೆ ಹಣೆಯಲ್ಲಿ ಪುಟ್ಟ ಕುಂಕುಮ.

ಪ್ರಶಾಂತಮೂರ್ತಿಯಂತಿದ್ದ ರಾಜ್‌ಕುಮಾರ್ ಅವರು ಸದಾಶಿವನಗರದ ತಮ್ಮ ಮನೆಯ ರೂಮಿಗೆ ಬಂದು ಕೂತರು. ಎದುರಿಗೆ ಹಂಸಲೇಖ ಮತ್ತು ಟಿ.ಎಸ್. ನಾಗಾಭರಣ. ಭೇಟಿ ‘ಆಕಸ್ಮಿಕ’ವಾಗಿರಲಿಲ್ಲ. ಆಕಸ್ಮಿಕ ಚಿತ್ರದ ಹಾಡಿಗಾಗಿ. ಹಂಸಲೇಖ ಸರಿಯಾಗಿಯೇ ಹೋಮ್‌ವರ್ಕ್ ಮಾಡಿಕೊಂಡು ಬಂದಿದ್ದರು. ನಿರ್ದೇಶಕ ನಾಗಾಭರಣರು ಮಾತ್ರ ಸ್ವಲ್ಪ ಗೊಂದಲದಲ್ಲಿದ್ದಂತೆ ಇತ್ತು. ‘ಕ್ಲೈಮ್ಯಾಕ್ಸ್‌ನಲ್ಲಿ ಹಾಡು ಸೇರಿಸಿದರೆ ಗತಿ ಏನಪ್ಪಾ, ಕಥೆ ದಿಕ್ಕು ತಪ್ಪಿದರೆ ಏನು ಮಾಡೋದಪ್ಪಾ’ ‘ಅಂತೆಲ್ಲ ಯೋಚನೆ ಮಾಡಿ ಮಾಡಿ ಸುಸ್ತಾಗಿದ್ದರು. ‘ಮೊದಲು ಹಾಡು ಹಾಕಿ. ಆಮೇಲೆ ಕ್ಲೈಮ್ಯಾಕ್ಸ್ ಶುರುವಾಗಲಿ’ ಅಂತ ವರದಪ್ಪ ಹೇಳಿದ್ದರು. ವರದಪ್ಪರ ಮಾತನ್ನು ಯಾರೂ ತಳ್ಳಿಹಾಕುವಂತಿರಲಿಲ್ಲ. ಸ್ಕ್ರಿಪ್ಟ್ ಅನ್ನು ಜಡ್ಜ್ ಮಾಡುವುದರಲ್ಲಿ ಅವರು ಮಾಸ್ಟರ್‌ಪೀಸ್. ‘ಇತ್ತೀಚೆಗೆ ರಾಜ್‌ಕುಮಾರ್ ಕನ್ನಡ ಸೊಗಡಿನ ಹಾಡನ್ನೇ ಹಾಡಿಲ್ಲ. ಕ್ಲೈಮ್ಯಾಕ್ಸ್‌ನಲ್ಲಿ ಅಂತದೇ ಹಾಡಿರಲಿ’ ಎಂದು ಪಾರ್ವತಮ್ಮ, ಚಿ.ಉದಯಶಂಕರ್ ಕೂಡ ಹೇಳಿದ್ದರು. ಆದರೆ ಚಿತ್ರಕಥೆ ಕಟ್ಟಿದ್ದ ನಾಗಾಭರಣರಿಗೆ ಈ ಸಲಹೆಗಳನ್ನು ಅರಗಿಸಿಕೊಳ್ಳೋದು ಸ್ವಲ್ಪ ಕಷ್ಟವೇ ಆಗಿತ್ತು.

‘ಆಕಸ್ಮಿಕ’ ಚಿತ್ರದಲ್ಲಿ ರಾಜ್‌ಕುಮಾರ್





‘ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು’ ಗೀತೆಯ ರೂವಾರಿಗಳು ಹಂಸಲೇಖ ಮತ್ತು ಟಿ.ಎಸ್. ನಾಗಾಭರಣ